**ದಿನಾಂಕ 08.11.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀಮತಿ ಬಿ.ಟಿ.ಎಂ. ವಕೀಲರಿಂದಃ**

1. ಎಂ.ವಿ.ಸಿ. 616/2021 ರ ಕೇಸನ್ನು ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದೇನೆ ಎಂದರೆ ಸರಿ. ನಾವು ರಾಜಿಗೂ ಸಹ ಈ ಕೇಸಿನಲ್ಲಿ ಕೇಳಿಕೊಂಡಿದ್ದೆವು ಎಂದರೆ ಸರಿ. ಕಂಪನಿಯವರು ರಾಜಿ ಮಾಡಿಕೊಳ್ಳಲು ಒಪ್ಪದೇ ಇದ್ದ ಕಾರಣ ಸದರಿ ಕೇಸನ್ನು ನಾವು Withdraw ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅಧಿಕೃತ ಪ್ರಯಾಣಿಕರಾಗಿ ಹೋಗುತ್ತಿದ್ದ ಕಾರಣ ರಾಜಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನಾಂಕ ನನಗೆ ನೆನಪಿಲ್ಲ, ನಾನು ಮರೆತು ಹೋಗಿದ್ದೇನೆ, ಸುಮಾರು 3-4 ವರ್ಷಗಳ ಹಿಂದೆ ನನ್ನ ಮಗನಿಗೆ ಅಪಘಾತವಾಗಿರುತ್ತದೆ. ಸದರಿ ಕೇಸನ್ನು ನಾನು 2 ವರ್ಷಗಳ ಒಳಗೆ ಹಾಕಬೇಕಿದ್ದು, ಈಗ ಹಾಕಿರುವ ಕಾರಣ ಯಾವುದೇ ಪರಿಹಾರ ಬರುವುದಿಲ್ಲ ಎಂದರೆ ಸರಿಯಲ್ಲ. 2 ವರ್ಷ, 2 ತಿಂಗಳು, 17 ದಿನಗಳ ತಡವಾಗಿ ಕೇಸನ್ನು ತಂದಿದ್ದ ಕಾರಣ ಯಾವುದೇ ಪರಿಹಾರ ಬರುವುದಿಲ್ಲ ಎಂದರೆ ಸರಿಯಲ್ಲ.
2. ನನ್ನ ಮಗ ಗೋವಿಂದಪ್ಪನ ಬಳಿ ಕೂಲಿ ಕೆಲಸ ಮಾಡುತ್ತಿದ್ದನು. ಅದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮಗನಿಗೆ ತಿಂಗಳಿಗೆ ರೂ. 15000/- ಮತ್ತು ಪ್ರತಿದಿನ ರೂ. 500/- ಬಾಟಾ ಕೊಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅದರ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ಮಗ ಗೋವಿಂದರಾಜು ರವರ ಬಳಿ ಕೆಲಸ ಮಾಡದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ ರೂ. 15000/- ಮತ್ತು ಪ್ರತಿದಿನ ರೂ. 500/- ಬಾಟಾ ಕೊಡುತ್ತಿದ್ದರು ಎಂದು ನಾನು ಎಂ.ವಿ.ಸಿ ಕೇಸಿನಲ್ಲಿ ಎಲ್ಲಿಯೂ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಲ್ಲಿ ಡ್ರೈವರ್ ಮತ್ತು ಕ್ಲೀನರ್ ಹೋಗುತ್ತಿದ್ದರು, ಸದರಿ ವಾಹನದಲ್ಲಿ 6 ಜನಕ್ಕೂ ಹೆಚ್ಚು ಜನರು ಪ್ರಯಾಣಿಸುತ್ತಿದ್ದರು ಎಂದರೆ ಸರಿಯಲ್ಲ.

3. ಅವರು ಅಧಿಕೃತ ಪ್ರಯಾಣಿಕರಾಗಿದ್ದು, ಗೋವಿಂದರಾಜು ರವರ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ 21 ವರ್ಷ ವಯಸ್ಸಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ನನಗೆ ಇಬ್ಬರು ಮಕ್ಕಳು. ನಾನು ಮತ್ತು ನನ್ನ ಮಕ್ಕಳು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.**